ಇಂಜಿನಿಯರ್‌ರವರ ಮಟ್ಟದಲ್ಲಿರಬಹುದು ಅಥವಾ ಕಾರ್ಯದರ್ಶಿಯವರ ಮಟ್ಟದಲ್ಲಿರಬಹುದು. ಅದನ್ನು ತೀವ್ರವಾಗಿ ಪರಿಶೀಲನೆ ಮಾಡಿಸುತ್ತೇನೆ.

ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬೈಪಾಸ್ ರಸ್ತೆಗಳು.

676 - ಶ್ರೀ ಪಿ.ಜಿ.ಆರ್ ಸಿಂಧ್ಯ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 20,000 ಜನಸಂಖ್ಯೆ ಇರುವ ಬಹಳ ಪಟ್ಟಣ ಪ್ರದೇಶಗಳಲ್ಲಿ ಲೋಕೋಪಯೋಗಿ ರಸ್ತೆಗಳಲ್ಲಿ ಸಂಚಾರ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಕಾರ್ಯಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಬೈಪಾಸ್ ಮಾಡುವ ಸಮಗ್ರ ಪ್ರಸ್ತಾಪ ಇರುವುದಿಲ್ಲ. ಸಂಚಾರ ದಟ್ಟಣೆ ತೀವ್ರತೆ ಹಾಗೂ ಅನುದಾನದ ಲಭ್ಯತೆ ಇವುಗಳನ್ನು ಅನುಸರಿಸಿ ನಗರ ಪ್ರದೇಶದಲ್ಲಿ ಬೈಪಾಸ್ ನಿರ್ಮಾಣವನ್ನು ಮಾಡಲಾಗುತ್ತಿದೆ.

ಇ) ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಬೈಪಾಸ್ ಮಾಡುವ ಸಮಗ್ರ ಕಾರ್ಯಕ್ರಮ ರೂಪಿಸಿಲ್ಲ. ಸಂಚಾರ ದಟ್ಟಣೆ ತೀವ್ರತೆ, ತುರ್ತು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗಳನ್ನು ಅನುಸರಿಸಿ ಬೈಪಾಸ್ ನಿರ್ಮಾಣವನ್ನು ಮಾಡಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಿಂದ ನಾನು ಎರಡು ಉಪಪ್ರಶ್ನೆಗಳನ್ನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಇದು ಇಡೀ ರಾಜ್ಯಕ್ಕೆ ವ್ಯಾಪಕವಾಗಿರತಕ್ಕ ಪ್ರಶ್ನೆ. ಬಹಳ ಕಡೆಗಳಲ್ಲಿ ಬೈಪಾಸ್ ರಸ್ತೆಗಳನ್ನು ಮಾಡದಿರುವುದರಿಂದ ತೊಂದರೆಯಾಗಿದೆ. 175 ತಾಲ್ಲೂಕುಗಳಲ್ಲಿ 250 ಪಟ್ಟಣಗಳ ಪೈಕಿ 40-50 ಪಟ್ಟಣಗಳಲ್ಲಿ ಬೈಪಾಸ್ ರಸ್ತೆಗಳು ಆಗಿರಬಹುದು. ಇನ್ನು 200 ಪಟ್ಟಣಗಳಿಗೆ ಬೈಪಾಸ್ ರಸ್ತೆಗಳನ್ನು ನಾವು ಮಾಡಬೇಕಾಗುತ್ತದೆ. ಬೈಪಾಸ್ ರಸ್ತೆಗಳನ್ನು ಮಾಡಬೇಕಾದರೆ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ? ಅಲ್ಲಿ ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇಗಳು ಎಷ್ಟು ಪಾಸಾಗುತ್ತವೆ? ಕೇಂದ್ರ ಸರ್ಕಾರದಿಂದ ನಾವು ಏನಾದರೂ ಸಾಲ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಬಹುತೇಕ ಪಟ್ಟಣಗಳಲ್ಲಿ ಸುಮಾರು 4 ಕಿಲೋಮೀಟರ್ ಹೋಗಬೇಕಾದರೆ 1 ಗಂಟೆ ಸಮಯ ಬೇಕಾಗುತ್ತದೆ. ಪುತ್ತೂರು ಇಂತಹ ಕಡೆಗಳಲ್ಲಿ ಈಗ ಬೈಪಾಸ್ ರಸ್ತೆ ಆಗುತ್ತಾ ಇದೆ. ನಮ್ಮ ಕನಕಪುರದಲ್ಲಿ 2 ಕಿಲೋಮೀಟರ್ ಈ ಕಡೆಯಿಂದ ಆ ಕಡೆಗೆ ಹೋಗಬೇಕಾದರೆ ಅರ್ಧಗಂಟೆ ಬೇಕಾಗುತ್ತದೆ. ಇದರಿಂದ ಬೇಕಾದಷ್ಟು ಡೀಸಲ್ ಮತ್ತು ಪೆಟ್ರೋಲ್ ವೇಸ್ಟ್ ಆಗುತ್ತದೆ. ಆದ್ದರಿಂದ ಒಂದು ಕಾಂಪ್ರಹೆನ್ಸಿವ್ ಪ್ರಾಜೆಕ್ಟನ್ನು ನೀವು ತಯಾರು ಮಾಡಿ ವರ್ಲ್ಡ್‌ಬ್ಯಾಂಕ್ ಸಹಾಯ ಪಡೆಯುವುದಕ್ಕೆ ಸಾಧ್ಯವೇ? ಅಥವಾ ಕೇಂದ್ರದ ಸಹಾಯ ಪಡೆಯುವುದಕ್ಕೆ ಸಾಧ್ಯವೆ? ನಮ್ಮ ರಾಜ್ಯಸರ್ಕಾರದವರು ಲೋಕೋಪಯೋಗಿ ಇಲಾಖೆಮತಿಯಿಂದ ಹೊಸದಾಗಿ ಏನು ರಸ್ತೆಗಳನ್ನು ಮಾಡುತ್ತಿದ್ದಾರೆ, ಅದರಲ್ಲಿ ಇದಕ್ಕೆ ಸ್ವಲ್ಪ ಹಣವನ್ನು ತೆಗೆದುಕೊಂಡು ಬೈಪಾಸ್ ರಸ್ತೆಗಳನ್ನು ಮಾಡಲಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ಪಟ್ಟಣಪ್ರದೇಶಗಳಲ್ಲಿ ಜಮೀನು ಸಿಗುವುದು ಕಷ್ಟವಾಗುತ್ತದೆ. ಈಗಲೇ

ಇದಕ್ಕೆ ಇಯರ್ ಮಾರ್ಕ್ ಮಾಡದಿದ್ದರೆ ಸಾಧ್ಯವೇ ಇಲ್ಲವೆಂದು ನಾನು ಅಂದು ಕೊಂಡಿದ್ದೇನೆ. ಅಂತಹ ಜಾಗಗಳನ್ನಾದರೂ ಇಯರ್ ಮಾರ್ಕ್ ಮಾಡತಕ್ಕ ಕ್ರಮವನ್ನು ಒಂದು ಹಂತದಲ್ಲಿ ಮಾಡುವುದಕ್ಕೆ ಸಾಧ್ಯವೇ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಇಲ್ಲದಿದ್ದರೆ ಅಲ್ಲಿರತಕ್ಕ ಬಿಲ್ಡಿಂಗ್‌ಗಳನ್ನು ಲಿಫ್ಟ್ ಮಾಡಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಸಲಹೆ ಬಹಳ ಉತ್ತಮವಾದ ಸಲಹೆ. ಈ ದಿಸೆಯಲ್ಲಿ ಸರ್ಕಾರ ಒಂದು ಸರ್ವೆಮಾಡಿಸಿ ಒಂದು ಪ್ಲಾನ್ ಮಾಡಿಸಿ ಅದಕ್ಕೆ ಬೇಕಾಗಿರತಕ್ಕ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಕಾರಣಾಂತರಗಳಿಂದ ಸರ್ಕಾರ ಅದನ್ನು ಮಾಡುವುದಕ್ಕೆ ಆಗಿಲ್ಲ. ನಾನೂ ಕೂಡ ಬೆಳಿಗ್ಗೆ ಚಿಂತನೆ ಮಾಡುವಾಗ ಈ ವಿಚಾರ ಹೊಳೆಯಿತು. ಅದನ್ನು ಮಾಡಿಸಲಿಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಅದಕ್ಕೆ ಪರ್‌ಸ್ಪೆಕ್ಟಿವ್ ಪ್ಲಾನ್‌ಗಳನ್ನು ಮಾಡಿ ಇಟ್ಟರೆ ಅದು ಅನೂಚಾನವಾಗಿ ಮಾಡತಕ್ಕ ಕಾರ್ಯಕ್ರಮವಾಗುತ್ತದೆ. ಯಾವುದೇ ಸರ್ಕಾರ ಬಂದರೂ ಕೂಡ ಈವೊಂದು ಕಾರ್ಯಕ್ರಮವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಮಾನ್ಯ ಸದಸ್ಯರು ನಮಗೆ ಮುಂದೆ ಜಾಗ ಸಿಗುವುದಿಲ್ಲವೆಂದು ಹೇಳಿದರು. ಜಾಗ ಸಿಗತಕ್ಕದ್ದು ಇವತ್ತು ಬಹಳ ಕಷ್ಟವಾಗಿದೆ. ಸಣ್ಣ ಪುಟ್ಟ ಆಶ್ರಯ ಮನೆಗಳನ್ನು ಕಟ್ಟಬೇಕಾದರೆ ಕೆಲವು ಪ್ರದೇಶಗಳಲ್ಲಿ 1 ಎಕರೆಗೆ 1 ಲಕ್ಷಕ್ಕಿಂತ ಹೆಚ್ಚು ಹಣವನ್ನು ಕೊಡತಕ್ಕ ಪರಿಸ್ಥಿತಿ ಇದೆ. ಹಾಗಾಗಿ ರಸ್ತೆ ಮಾಡುವುದಕ್ಕೆ ಮುಂದೆ ಜಾಗ ಸಿಗುತ್ತದೆಯೇ ಎನ್ನುವುದು ಯೋಚನೆ ಮಾಡತಕ್ಕ ವಿಚಾರ. ಸರ್ವೆ ಮಾಡಿಸಿ ರಾಜ್ಯದ ಹೆದ್ದಾರಿ ಹೋಗತಕ್ಕ ಊರುಗಳು ಯಾವುದು, ರಾಷ್ಟ್ರೀಯ ಹೆದ್ದಾರಿ ಹೋಗತಕ್ಕ ಊರುಗಳು ಯಾವುದು ಎಂದು ನೋಡಬೇಕಾಗಿದೆ. ಕನಕಪುರ ಬಗ್ಗೆ ಹೇಳಿದರು. ಅಲ್ಲೊಂದು ಸೇತುವೆ ಬರತಕ್ಕದ್ದನ್ನು ನೋಡಿದರೆ it needs a By-pass. ಅಂತಹ ಪರಿಸ್ಥಿತಿ ಇದೆ. ಹಾಗಾಗಿ ಇದರ ಬಗ್ಗೆ ಸರ್ಕಾರ ಗಮನಹರಿಸುತ್ತದೆ ಎನ್ನುವ ಮಾತನ್ನು ಮಾನ್ಯ ಸದಸ್ಯರಿಗೆ ಮತ್ತು ಸದನಕ್ಕೆ ಕೊಡಲಿಕ್ಕೆ ಇಚ್ಛೆ ಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸರ್ಕಾರದವರು ಒಂದು ಉತ್ತಮವಾದ ಕೆಲಸವನ್ನು ಮಾಡಿದ್ದಾರೆ. ಟ್ರಾಫಿಕ್ ಸರ್ವೆ ಮಾಡುವುದಕ್ಕೆ ರಾಜ್ಯದಲ್ಲಿರತಕ್ಕಂಥ ಒಬ್ಬ ಐ.ಜಿ.ಪಿ. ಲೆವಲ್ ಅಧಿಕಾರಿಯನ್ನು ಟ್ರಾಫಿಕ್ ಇನ್‌ಚಾರ್ಜ್ ಅಂತ ಮಾಡಿ ನೇಮಿಸಿದ್ದಾರೆ. ರಾಜ್ಯದಲ್ಲಿ ತಕ್ಕಂಥ ಎಲ್ಲಾ ಟ್ರಾಫಿಕ್ ಸರ್ವೆ ಮಾಡಿ ಮತ್ತು ಅಕ್ಸಿಡೆಂಟ್ಸ್ ಕಡಿಮೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಳ್ಳಬೇಕು, ರಸ್ತೆಗಳನ್ನು ಎಲ್ಲೆಲ್ಲಿ ಅಗಲಗೊಳಿಸಬೇಕು ಎನ್ನುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ. ಈಗ ತಮಗೆ ತಿಳಿದ ಹಾಗೆ, ಅನೇಕ ಚೀಫ್ ಇಂಜಿನಿಯರುಗಳಿಗೆ ಕೆಲಸ ಇಲ್ಲ. One Chief Engineer should be made in-charge of Traffic Study. ಅನೇಕ ಚೀಫ್ ಇಂಜಿನಿಯರ್‌ಗಳಿಗೆ ಕೆಲಸ ಇಲ್ಲದೇ ಇರುವಾಗ ಒಬ್ಬ ಚೀಫ್ ಇಂಜಿನಿಯರ್ ಅನ್ನು ಇದಕ್ಕೋಸ್ಕರವೇ ಮೀಸಲಾಗಿ ಇರಿಸಿ, ಯಾವ ರೀತಿ ಒಬ್ಬ ಐ.ಜಿ.ಪಿ. ಯನ್ನು Traffic Management, Accident Management ಎಂದು ಇಟ್ಟಿದ್ದೀರಿ, ಹಾಗೆ ಇವರನ್ನು ನೇಮಿಸಬೇಕು. ಇದು ಇನ್ನು ಐದಾರು ತಿಂಗಳುಗಳಲ್ಲಿ ಆಗಬೇಕು. ತಮ್ಮ ಕಾಲದಲ್ಲಿ ಇದು ಆಗದೇ ಹೋದರೆ ಮತ್ತೆ ಆಗುವುದಿಲ್ಲ. ಆದ್ದರಿಂದ ದಯವಿಟ್ಟು ಒಬ್ಬ ಚೀಫ್ ಇಂಜಿನಿಯರ್ ಅನ್ನು ಇದಕ್ಕೆ ನೇಮಿಸಿ. ನ್ಯಾಷನಲ್ ಹೈವೇಗೋಸ್ಕರ ಒಬ್ಬರನ್ನು ಇಟ್ಟಿದ್ದಾರೆ, ಅವರಿಗೆಲ್ಲ ನಾನು ಹೇಳುವುದು. exclusively for making projects on by-passes.

ದುಡ್ಡು ಎಷ್ಟು ಬೇಕಾಗುತ್ತದೆ, ಯಾವ್ಯಾವ ಊರಲ್ಲಿ ಎಲ್ಲೆಲ್ಲಿ ಬೈಪಾಸ್‌ಗಳನ್ನು ಮಾಡಬೇಕು ಎಂಬುದನ್ನು ನೋಡಬೇಕು. ತಮಗೆ ಉದಾಹರಣೆಗೆ ಹೇಳುವುದಾದರೆ, ಅನೇಕ ಕಡೆ ಊರುಗಳಲ್ಲಿ ಕೆರೆಗಳು ಇವೆ, ಅಲ್ಲಿ ಅಚ್ಚುಕಟ್ಟೇ ಇಲ್ಲ. ಜಿಲ್ಲಾ ಪರಿಷತ್ತಿನ ಅಥವಾ ಮೈನರ್ ಇರಿಗೇಶನ್ ಟ್ಯಾಂಕ್‌ಗಳು ಇವೆ. ಅವುಗಳನ್ನು ನೀವು ತೆಗೆದುಕೊಂಡರೆ ಅನೇಕ ಕಡೆಗಳಲ್ಲಿ ಬೈಪಾಸ್ ಮಾಡುವುದಕ್ಕೆ ಸಾಧ್ಯವಿದೆ. ಆದರೆ

ಇದು ಎನ್‌ಕ್ರೋಚ್ ಆಗುತ್ತಿದೆ. ಆದ್ದರಿಂದ ಕೂಡಲೇ ಇನ್ನು ಆರು ತಿಂಗಳು, ಒಂದು ವರ್ಷದೊಳಗೆ, I can understand the limitations of the budget. ನಾನು ಸಲಹೆ ಕೊಡುತ್ತಿದ್ದೇನೆ. ಏನೆಂದರೆ, ಒಬ್ಬ ಚೀಫ್ ಇಂಜಿನಿಯರ್ ಅನ್ನು ಈ ಕೆಲಸಕ್ಕೋಸ್ಕರವೇ ಇಟ್ಟು ಯಾವ ರೀತಿ ಪೋಲೀಸ್ ಇಲಾಖೆಯಲ್ಲಿ ಟ್ರಾಫಿಕ್‌ಗೋಸ್ಕರವೇ ಇಟ್ಟು ಯಾವ ರೀತಿ ಪೋಲೀಸ್ ಇಲಾಖೆಯಲ್ಲಿ ಟ್ರಾಫಿಕ್‌ಗೋಸ್ಕರ ಒಬ್ಬರಿದ್ದಾರೆ, ಹಾಗೆ ಇವರನ್ನು ಇಡಬೇಕು. ಶ್ರೀ ದಿನಕರ ಎಂಬ ಒಬ್ಬ ಅಧಿಕಾರಿ ಬಹಳ ಚೆನ್ನಾಗಿ ಸ್ಟಡಿ ಮಾಡಿದ್ದಾರೆ. ಅವರು ಉತ್ತಮವಾದ ಒಂದು ರಿಪೋರ್ಟ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರೇನು ವಿವರಗಳನ್ನು ಕೊಟ್ಟಿದ್ದಾರೆ, ಅವರ ಜೊತೆಯಲ್ಲಿ ಕೋಆರ್ಡಿನೇಟ್ ಮಾಡಿ ಕೊನೆಯಪಕ್ಷ ಇನ್ನು ಒಂದು ವರ್ಷದಲ್ಲಿ ಹೆಚ್ಚು ತಾಲ್ಲೂಕುಗಳಿಗೆ ಆಗದೇ ಹೋದರೂ ಸಹ ಐದಾರು ತಾಲ್ಲೂಕುಗಳಲ್ಲಿ ಮಾಡಿದರೂ ಸಹ it will be a big achievement. ಇಯರ್‌ಮಾರ್ಕ್ ಮಾಡಿದರೂ ಸಾಕಾಗಿದೆ. ಅದಕ್ಕೋಸ್ಕರ ಒಬ್ಬ ಚೀಫ್ ಇಂಜಿನಿಯರ್ ಅನ್ನು ಇಡುವುದಕ್ಕೆ ಸಾಧ್ಯವೇ? ಮತ್ತು ಒಂದು ವರ್ಷದೊಳಗಡೆ ಈ ಪ್ರಾಜೆಕ್ಟ್‌ನ್ನು ತಯಾರು ಮಾಡುವುದಕ್ಕೆ ಸಾಧ್ಯವೇ ಎಂದು ನಾನು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಒಬ್ಬ ಐ.ಜಿ.ಪಿ. ಅವರನ್ನು ಟ್ರಾಫಿಕ್ ಭಾಗದಿಂದ ನೇಮಕ ಮಾಡಿರತಕ್ಕಂಥಾದ್ದು ನನಗೆ ಗೊತ್ತು. He has identified the vulnerable spots on the National Highways. ಅದನ್ನು ನ್ಯಾಷನಲ್ ಹೈವೇನಲ್ಲಿ ಮಾಡಿದ ಹಾಗೆ ಕಾಣುತ್ತದೆ. ರಾಜ್ಯ ಹೆದ್ದಾರಿಗಳಲ್ಲಿ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಇದು ಉತ್ತಮವಾದಂಥ ಸಲಹೆ ಮತ್ತು ಸರ್ಕಾರ ಇದನ್ನು ಪರಿಶೀಲನೆ ಮಾಡುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಎಷ್ಟೋ ಕಡೆ ಸರ್ಕಾರ ಬೈಪಾಸ್ ಕೆಲಸಗಳನ್ನು ಮಾಡುತ್ತಿದೆ, ಇಲ್ಲ ಎಂದು ಅಲ್ಲ. ಮುಖ್ಯವಾಗಿ ಏನಾಗಿದೆ ಎಂದರೆ, ನಾನು ಹುಬ್ಬಳ್ಳಿಯ ಉದಾಹರಣೆ ಕೊಡುತ್ತೇನೆ. ಹುಬ್ಬಳ್ಳಿಯಲ್ಲಿ ಬೈಪಾಸ್ ನಿರ್ಮಿಸುವ ಕೆಲಸ ಕಳೆದ ಐದಾರು ವರ್ಷಗಳಿಂದ ನಡೆಯುತ್ತಿದ್ದರೂ ಬಹಳ ನಿಧನವಾಗಿದೆ. ಏಕೆ ಕೆಲಸ ನಿಧಾನವಾಗಿದೆ ಎಂದರೆ, ಮುಖ್ಯವಾಗಿ ಲ್ಯಾಂಡ್ ಅಕ್ವಿಸಿಶನ್ ಕೆಲಸ ಬಹಳ ನಿಧಾನವಾಗಿದೆ. ಲ್ಯಾಂಡ್ ಅಕ್ವಿಸಿಶನ್ ಪ್ರೊಸೆಸ್‌ಗೂ ಮತ್ತು ಪೇಮೆಂಟ್ ಆಫ್ ಕಂಪನ್‌ಸೇಶನ್ ಎರಡಕ್ಕೂ ಲಿಂಕ್ ಇದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಹೆಚ್ಚಿನ ಆದ್ಯತೆ ಕೊಟ್ಟು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ ಬೇಗ ಅಕ್ವಿಸಿಶನ್ ಆಗಲಿಕ್ಕೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕೆ.ಎಚ್. ರಂಗನಾಥ್ : ಈಗ ಬೇಗ ಲ್ಯಾಂಡ್ ಅಕ್ವಿಸಿಶನ್ ಮಾಡತಕ್ಕದ್ದು. ಬೇಗ ಕೆಲಸ ಮಾಡತಕ್ಕದ್ದು ಎಂಬ ಸಲಹೆ ಬಗ್ಗೆ ಮರುಮಾತಿಲ್ಲ. ಅದು ಆಗಲೇಬೇಕು. ಹುಬ್ಬಳ್ಳಿ ಬೈಪಾಸ್ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಪ್ರಸ್ತಾಪ ಮಾಡಿದ್ದಾರೆ, ಇದು ಅರ್ಧದಷ್ಟು ಕೆಲಸ ತುಂಬ ಶೀಘ್ರಗತಿಯಲ್ಲಿ ನಡೆಯುತ್ತಿದೆ. ಬಹಳ ಮಟ್ಟಿಗೆ ತಾವು ಗಮನಿಸಿರಬಹುದೇನೋ, ಹುಬ್ಬಳ್ಳಿ ನ್ಯಾಷನಲ್ ಹೈವೇ ಬೈಪಾಸ್‌ನಿಂದ ಕಲ್ಲಟಗಿ ಕ್ರಾಸ್ ಏನು ಬರುತ್ತದೆ, ಅಲ್ಲಿಯವರೆಗೆ ಕೆಲಸ ಶೀಘ್ರಗತಿಯಲ್ಲಿ ನಡೆಯುತ್ತಿದೆ. ಅಲ್ಲಿಂದ ಮುಂದೆ ಆಗುವುದಕ್ಕೆ ಕೇಂದ್ರ ಸರ್ಕಾರದವರು ಇನ್ನೂ ಸ್ಯಾಂಕ್ಷನ್ ಮಾಡಿ ಕೊಟ್ಟಿಲ್ಲ. ಇದಕ್ಕೆ ಹಣ ಇಲ್ಲ. ಅವರೇ ಹಣ ಸ್ಯಾಂಕ್ಷನ ಮಾಡಬೇಕು; ನಾನು ಮೊನ್ನೆ ಕೂಡ ಒಬ್ಬ ನಮ್ಮ ಪಾರ್ಲಿಮೆಂಟ್ ಸದಸ್ಯರ ಜೊತೆ ಪ್ರಸ್ತಾಪ ಮಾಡುವಾಗ ಹೇಳಿದ್ದೆ. ಇತ್ತೀಚಿಗೆ ಏನು ಆಗಿದೆಯೋ ಗೊತ್ತಿಲ್ಲ. ಮೂರು-ನಾಲ್ಕು ತಿಂಗಳ ಹಿಂದಿನ ವಿಷಯ ನಾನು ಹೇಳುತ್ತಾ ಇರುವುದು. ಅದು ಸ್ಯಾಂಕ್ಷನ್ ಆಗಬೇಕು. ಆದರೆ ಹುಬ್ಬಳ್ಳಿಯಿಂದ ಧಾರವಾಡ ಕಡೆಗೆ ಹೋಗತಕ್ಕಂಥ ರಸ್ತೆಯಲ್ಲಿ ಒಂದು ಪಾಯಿಂಟ್‌ನಿಂದ ಡೀವಿಯೇಶನ್ ಆಗಿ ಕಲ್ಲಟಗಿವರೆಗೆ ಏನು ಹೋಗುತ್ತದೆ, ಅಲ್ಲಿಯೂ ಕೂಡ ಬಹಳ ಶೀಘ್ರಗತಿಯಲ್ಲಿ ಕೆಲಸ ನಡೆಯುತ್ತಿದೆ.